'ಅನಾಥ ಪಕ್ಷಿಯ ಕಲರವ'(1997) ಕೃತಿಯ 'ಬ್ಲರ್ಬ್'ಗಾಗಿ ಕತೆಗಾರ ಡಾ. ಬೆಸಗರಹಳ್ಳಿ ರಾಮಣ್ಣ ಅವರು ಬರೆದಿರುವ ಈ ಮಾತುಗಳು ವೀರಭದ್ರ ಅವರ ಕತೆಗಳ ಮಹತ್ವವನ್ನು ಸೂತ್ರರೂಪವಾಗಿ ಹಿಡಿದಿಟ್ಟಿವೆ.

ಬಳ್ಳಾರಿ ಜಿಲ್ಲೆಯ ಆದವಾನಿಯಲ್ಲಿ 10–7–1937 ರಂದು ಜನಿಸಿದ ವೀರಭದ್ರ (ನಿಧನ 6–9–2017) ಅವರಿಗೆ ಪ್ರಪಂಚದ ಪ್ರಪ್ರಥಮ ಕತೆಗಾರ, ಹತ್ತನೇ ಶತಮಾನದ ಕನ್ನಡಿಗ 'ವಡ್ಡಾರಾಧನೆ' ಕಥಾ ಸಂಕಲನಕಾರ ಶ್ರೀ ಶಿವಕೋಟಾಚಾರ್ಯ ಇದ್ದ ಜಿಲ್ಲೆಗೆ ಸೇರಿದ ಊರಿನಲ್ಲಿ ತಾನು ಜನಿಸಿದ್ದೇನೆ ಎನ್ನುವುದರ ಬಗ್ಗೆ ತುಂಬಾ ಅಭಿಮಾನವಿತ್ತು. ಅವರೊಬ್ಬ ವಿಶಿಷ್ಟ ಕತೆಗಾರ, ಅನನ್ಯ ಅನುವಾದಕ. 'ನೀಲಿ ನೀರಿನ ಮೇಲೆ', 'ಈ ಭೂಮಿ ಆ ಆಕಾಶ', 'ಮರೆಯವರು', 'ಬಾವಿಯಿಂದ ಬೇರಿಗೆ', 'ಕನ್ನಡಿ ನೋಡಿದ ನಾಯಿ' – ಈ ಐದು ಕೃತಿಗಳಲ್ಲಿ ಅವರ ಅರವತ್ತಕ್ಕೂ ಹೆಚ್ಚು ಕತೆಗಳು ಪ್ರಕಟವಾಗಿವೆ. ಅವರ ಅನುವಾದಿತ ಕಾದಂಬರಿಗಳು – ಶರಚ್ಚಂದ್ರ ಅವರ 'ಚರಿತ್ರ ಹೀನ', 'ದೇವದಾಸ', 'ನಾನು ಮಾಧವಿ', 'ಮನೆ ಸುಟ್ಟಿತು', 'ರಾಮನ ಬುದ್ಧಿವಂತಿಕೆ', 'ಕತ್ತಲಲ್ಲಿ ಬೆಳಕು'.

ತೆಲುಗಿನಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ವಿಶ್ವನಾಥ ಸತ್ಯನಾರಾಯಣ ಅವರ 'ಅನಾಥಪಕ್ಷಿ', ಚಲಂ ಅವರ 'ಮೈದಾನ', ರಾಚಕೊಂಡ ವಿಶ್ವನಾಥ ಶಾಸ್ತ್ರಿ ಅವರ 'ಅಲ್ಪ ಜೀವಿ' ಈ ಅನುವಾದಗಳ ಜೊತೆಗೆ ವಿಶ್ವನಾಥ ಸತ್ಯನಾರಾಯಣ, ಚಲಂ, ಪಾಲಗುಮ್ಮಿ ಪದ್ಮರಾಜು, ಬುಚ್ಚಿ ಬಾಬು, ತೂಲಿಕಾ ಭೂಷಣ್, ಬಲಿವಾಡ ಕಾಂತರಾವ್, ಅಚ್ಯುತವಲ್ಲಿ, ಮಂಜುಶ್ರೀ, ಸಿ. ರಾಮಚಂದ್ರರಾವ್, ಬಾಲಗಂಗಾಧರ ತಿಲಕ್, ಜಂಪನ ಪೆದ್ದಿರಾಜು, ಸಿ.ಆರ್. ರಾವು, ರಾಚಕೊಂಡ ವಿಶ್ವನಾಥ ಶಾಸ್ತ್ರೀ – ಈ ಕತೆಗಾರರ ಅನೇಕ ಕತೆಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ. ಅವರ ಸಮಗ್ರ ಅನುವಾದಿತ ಕತೆಗಳ ಸಂಕಲನ 'ನೆರೆಯವರ ಕತೆಗಳು'ನಲ್ಲಿ ಈ ಕತೆಗಳು ಸೇರಿವೆ.

ಅರವತ್ತರ ದಶಕದಲ್ಲಿ ವೀರಭದ್ರ ಅವರು ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ದಿನಗಳು ಸೃಜನಶೀಲ ಸಾಹಿತ್ಯ ಹಾಗೂ ಶಾಸ್ತ್ರ ಸಾಹಿತ್ಯ ಈ ಎರಡೂ ಹೊಯ್ಯ ಕಯ್ಯಾಗಿ ಅಭಿವ್ಯಕ್ತಿ ಪಡೆಯುತ್ತಿದ್ದವು. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಬಿ.ವಿ. ವೈಕುಂಠರಾಜು, ಸಿ.ಪಿ.ಕೆ., ಎ.ಎಸ್. ಜಯರಾಮ್, ಕೆ. ಶಿವರಾಮ ಐತಾಳ, ಜಿ.ಎಚ್. ನಾಯಕ – ಈ ಒಬ್ಬೊಬ್ಬರು ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಛಾಪು ಮೂಡಿಸಿದವರು. ಇವರ ಗುರು ಪರಂಪರೆಯೂ ಅಂತದೇ ಆಗಿತ್ತು. ಡಿ.ಎಲ್.ಎನ್., ತೀನಂಶ್ರೀ, ಎಸ್.ವಿ. ಪರಮೇಶ್ವರ ಭಟ್ಟರು, ಪ್ರಭುಶಂಕರ ಮುಂತಾದ ಸವ್ಯಸಾಚಿಗಳ ಪಡೆಯೇ ಇತ್ತು. ಈ ವಿದ್ವಜ್ಜನರ ಪ್ರಭಾವಲಯದಲ್ಲಿದ್ದೂ ತೇಜಸ್ವಿ, ವೀರಭದ್ರ ಅಂತಹವರು ಸೃಜನಶೀಲತೆಯ ಕಡೆ ಒಲಿದರೆ, ಜಿ.ಎಚ್. ನಾಯಕ ಮುಂತಾದವರು ವಿಮರ್ಶೆಯನ್ನು ಆಯ್ಕೆ ಮಾಡಿಕೊಂಡರು.

ಮೈಸೂರಿನ ಸುತ್ತೂರು ಮಠದ ಆಶ್ರಯದಲ್ಲಿ ನಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ವೃತ್ತಿ ಜೀವನವನ್ನು ಪ್ರಾರಂಭಿಸಿದ ವೀರಭದ್ರ ಮೂರು ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿ ನಿವೃತ್ತರಾದರು.

ಶಿವರಾತ್ರೀಶ್ವರ ಉಚಿತ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದ್ದ ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಆಗಾಗ ಪ್ರಸಾದ ಸ್ವೀಕರಿಸುವ ಸಂದರ್ಭದಲ್ಲಿ ಭೇಟಿ ನೀಡಿ ವಿದ್ಯಾರ್ಥಿಗಳಿಗೆ 'ಕರಡಿಗೆ' ಧಾರಣೆ ಮಾಡಿದ್ದಾರೋ ಇಲ್ಲವೋ ಎನ್ನುವುದನ್ನು ಪರೀಕ್ಷಿಸುತ್ತಿದ್ದರು. ಇಂತಹ